


ಚಿತ್ರಗಳು: ಸೃಜನ್

ನನ್ನ ತಲೆ ಎಲ್ಲಾ ಕೆಟ್ಟುಬಿಟ್ಟಿತ್ತು. ಈ ಕ್ಷಣ ಬೆಂಗಳೂರಿಗೆ ಟಿಕೆಟ್ ತೆಗೆಸಬೇಕು. ಇವರಿಗೆ ಫೋನ್ ಮಾಡಿದರೆ ಸ್ವಿಚ್ ಆಫ್ ಅಂತನೇ ಬರ್ತಿದೆ. ಏನು ಮಹಾ ಘನಂದಾರಿ ದೇಶ ಉದ್ಧಾರ ಮಾಡೊ ಮೀಟಿಂಗೋ ಕಾಣೆ. ತೆಗೆದುಕೊಂಡು ಹೋಗುವ ಬಟ್ಟೆಗಳನ್ನೆಲ್ಲ ಒಂದು ಕಡೆ ಹಾಕುತ್ತ... ಹಾಗೆಯೇ ಮಗಳು ಶಾಲೆಯಿಂದ ಬರುವ ಹೊತ್ತಾಯಿತು ಎಂದು ಶಾವಿಗೆ ಮಾಡುತ್ತ... ಒಮ್ಮೆ ಫೋನ್, ಒಮ್ಮೆ ಪ್ಯಾಕಿಂಗ್ ಮತ್ತೊಂದು ಸಲ ಒಲೆಯ ಕಡೆ ಹೀಗೆ ತಿರುಗುತ್ತಿದ್ದೆ. ಕೋಪ ಮತ್ತು ಅಳು ಎರಡು ಉಕ್ಕಿ ಉಕ್ಕಿ ಬರುತ್ತಿತ್ತು. ನಾಲ್ಕು ಗಂಟೆಗೆ ಮನೆ ಮುಂದೆ ಸೈಕಲ್ ರಿಕ್ಷ ಬೆಲ್. ಪುಟ್ಟಿ ಬಂದಳು ಎಂದು ಬಾಗಿಲ ಬಳಿಗೆ ಹೋದೆ. ಕ್ವಾರ್ಟರ್ಸ್ ಮೆಟ್ಟಿಲು ಹತ್ತಿಕೊಂಡು ನಿಧಾನವಾಗಿ ಬರುತ್ತಿದ್ದಳು ಅರ್ಪಿತ. ಹೊರಲಾರದ ಬ್ಯಾಗ್ ಹೊತ್ತು ಬರುತ್ತಿದ್ದಳು ಮೂರನೇ ಅಂತಸ್ತಿನಲ್ಲಿದ್ದ ನಮ್ಮ ಮನೆಗೆ. ದಡ ದಡನೆ ಮೆಟ್ಟಿಲಿಳಿದು ಅವಳ ಕೈಯಲ್ಲಿದ್ದ ಬ್ಯಾಗ್, ಊಟದ ಬ್ಯಾಗ್ ಎರಡನ್ನೂ ತೆಗೆದುಕೊಂಡು ಬಂದೆ. ಅವಳು ಒಳಗೆ ಬಂದು ಶೂ ಬಿಚ್ಚಿ ಉಶ್ಯಪ್ಪ... ಅಂದಳು. ಅವಳನ್ನು ಎತ್ತಿಕೊಂಡು ಹೋಗಿ ಡ್ರೆಸ್ ಛೇಂಜ್ ಮಾಡಿಸಿ, ಕೈಕಾಲು ತೊಳೆಸಿ 'ಬೇಗ ತಿಂಡಿ ತಿನ್ನಲು ಬಾ' ಎಂದು ಕರೆದು ಅಡುಗೆ ಮನೆಗೆ